ಮಲೆಯೂರು ಗುರುಸ್ವಾಮಿ

# ಪ್ರಭು ಮಂದಹಾಸ

ಗಡಿ ಜಿಲ್ಲಾ ಕೇಂದ್ರ ಚಾಮರಾಜನಗರದಲ್ಲಿ ಜನಿಸಿದ ಲೇಖಕ ಪ್ರಭುಶಂಕರ ಅವರಿಗೆ ಜೀವಿತದ ಕೊನೆಯ ದಿನಗಳವರೆಗೂ ಮೈಸೂರು ಕರ್ಮ ಭೂಮಿಯಾಗಿತ್ತು. ಕನ್ನಡ ಎಂ.ಎ.ಗೆ ಸೇರುತ್ತಿದ್ದಂತೆ ಕುವೆಂಪು ಅವರ ಪ್ರಭಾವಕ್ಕೆ, ಹಾಗೆಯೇ ರಾಮಕೃಷ್ಣ ಆಶ್ರಮದ ಪ್ರಭಾವಕ್ಕೆ ಒಳಗಾದ ಪ್ರಭುಶಂಕರ ಅವರು ಕುವೆಂಪು ಅವರ ಕಣ್ಗಾವಲಿನಲ್ಲಿ ತಮ್ಮನ್ನು ರೂಪಿಸಿಕೊಳ್ಳುತ್ತಾ, ಅವರ ಮಾನಸಪುತ್ರರೆಂದೇ ಪರಿಗಣಿಸಲ್ಪಟ್ಟಿದ್ದರು. ಕುವೆಂಪು ಅವರ ಮಾರ್ಗದರ್ಶನದಲ್ಲಿ ಅವರು ಸಿದ್ಧಪಡಿಸಿದ ‘ಕನ್ನಡದಲ್ಲಿ ಭಾವಗೀತೆ’ ಮಹಾಪ್ರಬಂಧ ಮೈಸೂರು ವಿ.ವಿ. ಮೊದಲ ಡಾಕ್ಟರೇಟ್ ಪ್ರಬಂಧ ಎನ್ನುವ ಹೆಗ್ಗಳಿಕೆಗೆ ಪಾತ್ರವಾಗಿದೆ. (ಕುವೆಂಪು ಅವರು ಮಾರ್ಗದರ್ಶನ ಮಾಡಿದ ಮತ್ತೊಬ್ಬ ಶಿಷ್ಯರೆಂದರೆ ಜಿ.ಎಸ್. ಶಿವರುದ್ರಪ್ಪ. ಅವರ ಕೃತಿ: ಸೌಂದರ್ಯ ಸಮೀಕ್ಷೆ– ಕುವೆಂಪು ಅವರು ಮಹಾಪ್ರಬಂಧಕ್ಕೆ ಮಾರ್ಗದರ್ಶಕರಾದುದು ಈ ಇಬ್ಬರಿಗೆ ಮಾತ್ರ!) ಕುವೆಂಪು ಮತ್ತು ಪ್ರಭುಶಂಕರ ಅವರದು ಕೇವಲ ಗುರು ಶಿಷ್ಯರ ಸಂಬಂಧವಲ್ಲ. ಅದು ಆತ್ಮಸಂಬಂಧ.

ಸುತ್ತೂರು ಮಠದ ಹಿರಿಯ ಗುರುಗಳಾದ ಶಿವರಾತ್ರಿ ರಾಜೇಂದ್ರ ಸ್ವಾಮಿಗಳಿಗೆ ಕುವೆಂಪು ಅವರನ್ನು ಒಮ್ಮೆ

**ಇತ್ತೀಚೆಗೆ ನಿಧನರಾದ ಕನ್ನಡದ ಲೇಖಕ, ವಿದ್ವಾಂಸ, ಅನುವಾದಕ ಪ್ರಭುಶಂಕರ (1929-2018) ಅವರ ಬದುಕು-ಬರಹಗಳನ್ನು ಚಿತ್ರಿಸುವ ಬರಹ ಇಲ್ಲಿದೆ**

